ಹಿಂಬಾಲಿಸಿದವು. ಮುಂದೆ ನಾನು ಏನು ಮಾಡಲಿದ್ದೇನೆಂದು ಅವನು ಕುತೂಹಲಗೊಂಡಿರಬೇಕು. ನಾನು ಅವನಿಗೆ ತಾಗಿಕೊಂಡಂತೆಯೇ ಮಂಚದ ಬಳಿ ನಿಂತುಕೊಂಡೆ.

'ಹ್ಯಾರಿ?...' ನಾನು ಅವನ ಕಿವಿಯ ಬಳಿ ಬಾಗಿ ಮೆಲ್ಲಗೆ ಉಸುರಿದೆ. 'ನನಗೊಂದು ಉಪಾಯ ಹೊಳೆದಿದೆ. ನಿನ್ನ ಮೈ ಮೇಲಿನ ಹೊದಿಕೆಯನ್ನು ಹಾವಿಗೆ ಕಿಂಚಿತ್ತೂ ಗೊತ್ತಾಗದಂತೆ ಒಮ್ಮೆಲೆ ಎಳೆದುಬಿಡುವುದು!... ನಾನಿದನ್ನು ಮಾಡಬಲ್ಲೆನೆಂದು ನನಗೆ ವಿಶ್ವಾಸವಿದೆ. ಏನಂತಿಯಾ?'

'ನೀನು ತಲೆಕೆಟ್ಟವನಂತೆ ಮಾತನಾಡಬೇಡ ಟಿಂಬರ್!' ಅವನು ಒಮ್ಮೆಲೆ ಸಿಡಿಮಿಡಿಗೊಂಡ.

'ಅದ್ಯಾಕೆ ಹಾಗೆ ಹೇಳ್ತಿದ್ದೀಯಾ ಹ್ಯಾರಿ?' ನಾನೆಂದೆ.

'ಹೊದಿಕೆಯೊಳಗೆ ಕತ್ತಲೆ ಇದೆ ಎಂದು ಮರೀಬೇಡ! ನೀನು ಹೊದಿಕೆಯನ್ನು ಒಮ್ಮೆಲೇ ಎಳೆದರೆ ಹಾವು ಬೆಳಕಿಗೆ ಆತಂಕಗೊಂಡು ನನ್ನನ್ನು ಕಚ್ಚುವುದಿಲ್ಲವೇನೂ?'

'ಹಾಗಾದ್ರೆ ಬೇರೆ ಐಡಿಯಾ ಮಾಡೋಣ ಹ್ಯಾರಿ' ನಾನೆಂದೆ. 'ನಾನು ಒಮ್ಮೆಲೇ ಹೊದಿಕೆಯನ್ನು ಕಿತ್ತೊಗೆದು ಅದಕ್ಕೆ ಗೊತ್ತಾಗುವುದಕ್ಕೂ ಮೊದಲೇ ನಿನ್ನ ಹೊಟ್ಟೆಯ ಮೇಲಿಂದ ಎಳೆದೆಸೆಯುತ್ತೇನೆ.'

'ಅದರ ಬದಲು ನೀನೊಬ್ಬ ಡಾಕ್ಟರನ್ನು ಕರೆದು ತಂದರೆ ದೊಡ್ಡ ಉಪಕಾರವಾದೀತು.' ಅವನ ಕಣ್ಣುಗಳಲ್ಲಿ ನೀನು ಈ ಕೆಲಸವನ್ನು ಈ ಮೊದಲೇ ಮಾಡಬೇಕಿತ್ತೆಂಬ ಆಪಾದನೆ ಕಾಣುತ್ತಿತ್ತು.

'ಆಯ್ತು, ಆಯ್ತು. ಈಗಲೇ ನಮ್ಮ ಡಾಕ್ಟರ್ ಗಾಂಧೇರ್ ಭಾಯಿಯನ್ನು ಕರೆಸಿಕೊಳ್ಳುತ್ತೇನೆ' ನಾನೆಂದೆ.

ನಾನು ನಿಧಾನವಾಗಿ ಹಾಲಿನ ಕಡೆಗೆ ಹೆಜ್ಜೆ ಹಾಕತೊಡಗಿದೆ. ಡೈರೆಕ್ಟರಿಯಲ್ಲಿ ಡಾಕ್ಟರ್ ಗಾಂಧೇರ್ ಭಾಯಿಯ ನಂಬರನ್ನು ಹುಡುಕಿ ಅವರನ್ನು ಸಂಪರ್ಕಿಸಲು ಆಪರೇಟರ್‌ಗೆ ತಿಳಿಸಿದೆ.

'ಡಾಕ್ಟರ್ ಗಾಂಧೇರ್ ಭಾಯಿ? ಮಿಸ್ಟರ್ ಟಿಂಬರ್‌ವುಡ್ಸ್ ಮಾತನಾಡುತ್ತಿದ್ದೇನೆ.'

'ಹಲೋ ಮಿಸ್ಟರ್ ವುಡ್ಸ್... ಇನ್ನೂ ಮಲಗಿಲ್ಲವೆ?' ನಿದ್ದೆಯಿಂದ ಎದ್ದಿದ್ದ ಡಾಕ್ಟರ್ ಗಾಂಧೇರ್ ಭಾಯಿ ಗೊಗ್ಗರು ದನಿಯಲ್ಲಿ ಕೇಳಿದರು.

'ಸಾರಿ ಡಾಕ್ಟ್ರೇ, ದಯವಿಟ್ಟು ಆದಷ್ಟು ಬೇಗ ಬಂಗಲೆಯ ಕಡೆಗೆ ಬಂದು ಹೋಗಿ. ಬರುವಾಗ ಕೊಳಕು ಮಂಡಲ ಹಾವಿನ ಪ್ರತಿರೋಧಕ ಸೀರಮನ್ನು ತರಲು ಮರೆಯಬೇಡಿ...' ನಾನೆಂದೆ.

'ಯಾರಿಗೆ ಹಾವು ಕಚ್ಚಿತು ಮಿಸ್ಟರ್ ವುಡ್ಸ್?!' ಡಾಕ್ಟರ್ ಆತಂಕದಿಂದ ಕೇಳಿದರು.

'ಇದುವರೆಗೆ ಯಾರನ್ನೂ ಕಚ್ಚಿಲ್ಲ ಡಾಕ್ಟ್ರೇ. ಹ್ಯಾರಿ ಪೋಪ್ ಎದೆಮಟ್ಟ ಹೊದ್ದುಕೊಂಡು ಅಂಗಾತ ಮಲಗಿದ್ದಾನೆ. ಅವನ ಹೊದಿಕೆಯೊಳಗೆ ಹೊಟ್ಟೆಯ ಮೇಲೆ ಕೊಳಕು ಮಂಡಲ ಮಲಗಿದೆ!'

ಡಾಕ್ಟರ್ ಗಾಂಧೇರ್ ಭಾಯಿ ಕೆಲವು ಕ್ಷಣ ಮೌನರಾದರು. ನಂತರ, ಸ್ಪಷ್ಟವಾಗಿ ಒಂದೊಂದೇ ಶಬ್ದಗಳನ್ನು ಉಚ್ಚರಿಸುತ್ತಾ ಹೇಳತೊಡಗಿದರು:

'ಅವರಿಗೆ ಸ್ವಲ್ಪವೂ ಮಿಸುಕಾಡದೆ, ಮಾತನಾಡದೆ ಇರುವಂತೆ ಹೇಳಿ ಮಿಸ್ಟರ್ ವುಡ್ಸ್. ಅರ್ಥವಾಯ್ತೇ?'

'ಅರ್ಥವಾಯ್ತು ಡಾಕ್ಟ್ರೇ...'